
ಪ. ರಾಮಕೃಷ್ಣ ಶಾಸ್ತ್ರಿ

ಕಲೆ: ಗಣೇಶ ಆಚಾರ್ಯ

# ಮೊದಲ ತೆಂಗಿನಕಾಯಿ

ಒಂದು ಕಾಡಿನ ಬಿಲದಲ್ಲಿ ಹೆಣ್ಣು ಹಾವು ವಾಸವಾಗಿತ್ತು. ಒಂದು ಸಲ ಅದು ಒಂದೇ ಒಂದು ಮೊಟ್ಟೆಯನ್ನು ಇರಿಸಿತು. ಮೊಟ್ಟೆ ಮರಿಯಾದಾಗ ಹಾವಿಗೆ ಸೋಜಿಗವೊಂದು ಕಾದಿತ್ತು. ಮರಿ ಅದರಂತೆ ಹಾವಾಗಿರುವ ಬದಲು ಒಂದು ಹೆಣ್ಣುಮಗುವಾಗಿತ್ತು. ಯಾವುದೋ ಕಾಲದಲ್ಲಿ ಕಾಡಿನಲ್ಲಿ ಹೋಗುತ್ತಿದ್ದ ಗರ್ಭಿಣಿಯೊಬ್ಬಳನ್ನು ತಿನ್ನಲು ಹುಲಿಯೊಂದು ಮುಂದೆ ಬಂದಿತ್ತು. ಆಗ ಹಾವು ಹುಲಿಯ ಕಾಲಿಗೆ ಕಚ್ಚಿ ಅದನ್ನು ಓಡಿಸಿತ್ತು. ಜೀವ ಉಳಿಯಿತೆಂಬ ಕೃತಜ್ಞತೆಯಲ್ಲಿ ಹೆಂಗಸು ಆನಂದ ಭಾಷ್ಪಗಳನ್ನು ಹರಿಸಿ, 'ಮುಂದಿನ ಜನ್ಮದಲ್ಲಿ ನಾನು ನಿನ್ನ ಮಗಳಾಗಿ ಜನಿಸುತ್ತೇನೆ' ಎಂದು ಹೇಳಿದ್ದಳು. ಆ ಮಾತು ಹಾವಿಗೆ ನೆನಪಾಯಿತು. ಅದೇ ಹೆಂಗಸು ತನ್ನ ಮಗಳಾಗಿ ಜನಿಸಿದ್ದಾಳೆಂದು ತಿಳಿಯಿತು. ಪ್ರೀತಿಯಿಂದ ಮಗುವನ್ನು ಬೆಳೆಸಿತು. ಬೆಳಗ್ಗೆಯೇ ಕಾಡಿಗೆ ಹೋಗಿ ತಿನ್ನಲು ಹಣ್ಣು–ಬೀಜಗಳನ್ನು, ಕುಡಿಯಲು ಜೇನನ್ನು ತಂದುಕೊಡುತ್ತಿತ್ತು. ಮಗು ಸುಂದರವಾಗಿ ಬೆಳೆಯಿತು.



ಹಾವು ಮಗಳಿಗೆ ಮಾತನಾಡಲು, ನಡೆದಾಡಲು, ಈಜಲು ಕಲಿಸಿತು. ಮನುಷ್ಯರ ಹಾಗೆ ಬದುಕಲು ಕಲಿಸಿತು. ಹುಡುಗಿ ಪ್ರಾಯಕ್ಕೆ ಬಂದಾಗ ಬಳಿಗೆ ಕರೆದು, 'ನೀನಿನ್ನು ಇಲ್ಲಿಯೇ ಇದ್ದರೆ ನಿನ್ನ ಜೀವನ ಸುಖಮಯವಾಗುವುದಿಲ್ಲ. ನೀನು ಯಾವುದಾದರೂ ಊರಿಗೆ ಹೋಗಿ, ಮನುಷ್ಯರನ್ನೇ ಮದುವೆಯಾಗಬೇಕು' ಎಂದು ಹೇಳಿತು. ತನ್ನ ಬಿಲದಲ್ಲಿ ರಾಶಿ ಬಿದ್ದಿದ್ದ ಎಲ್ಲ ಬಂಗಾರವನ್ನೂ, ನವರತ್ನಗಳನ್ನೂ ಮೂಟೆ ಕಟ್ಟಿ ಮಗಳಿಗೆ ಕೊಟ್ಟಿತು. ಪಟ್ಟೆ ಪೀತಾಂಬರಗಳನ್ನು ಉಡಿಸಿತು. ನವವಧುವಿನಂತೆ ಸಿಂಗಾರ ಮಾಡಿ ಹಳ್ಳಿಯೊಂದರ ಬಳಿ ಕರೆತಂದು ಬಿಟ್ಟುಹೋಯಿತು.

ಆ ಹಳ್ಳಿಯಲ್ಲಿ ಸುರ ಸುಂದರನಾದ ಒಬ್ಬ ತರುಣನಿದ್ದ. ಅವನಿಗೆ ಮದುವೆಯ ಸಿದ್ಧತೆ ನಡೆದಿತ್ತು. ಆದರೆ, ದಿಬ್ಬಣದೊಂದಿಗೆ ಬರುತ್ತಿದ್ದ ಮದುಮಗಳು ಆಕಸ್ಮಿಕವಾಗಿ ದಾರಿಯಲ್ಲಿ ಸಾವನ್ನಪ್ಪಿದ ಕಾರಣ ಮದುವೆ ನಿಲ್ಲಿಸಬೇಕಾಗಿ ಬಂದಿತ್ತು. ಆಗ ಹಾವಿನ ಮಗಳು ಆ ಮನೆಯ ಬಾಗಿಲಿಗೆ ಬಂದಳು. ಅವಳ ಸೌಂದರ್ಯ, ಆಭರಣ, ಅಲಂಕಾರ ಕಂಡು ಮನೆಯವರೆಲ್ಲರೂ ಅಚ್ಚರಿಗೊಂಡರು. 'ಯಾರು ನೀನು? ಎಲ್ಲಿಂದ ಬಂದೆ?' ಎಂದು ಕೇಳಿದರು. 'ನಾನು ಕಾಡಿನಿಂದ ಬಂದವಳು. ಒಳ್ಳೆಯ ಹುಡುಗನನ್ನು ನೋಡಿ ಮದುವೆಯಾಗಲೆಂದು ನನ್ನ ತಾಯಿ ಕಳುಹಿಸಿದ್ದಾರೆ' ಎಂದಳು ಹುಡುಗಿ. ಮದುವೆಯನ್ನೇ ನಿಲ್ಲಿಸಲು ಮುಂದಾದವರಿಗೆ ಇದರಿಂದ ಸಂತೋಷವಾಯಿತು. ಮದುಮಗನನ್ನು ಅವಳಿಗೆ ತೋರಿಸಿ, 'ಅವನನ್ನು ಮದುವೆಯಾಗುತ್ತೀಯಾ?' ಎಂದು ಕೇಳಿದರು. ಅವಳು ಒಪ್ಪಿಕೊಂಡಳು.